ಶ್ರೀ ಜೆ. ದೇವಯ್ಯ.—ಇತ್ತೀಚೆಗೆ ಮಂಡ್ಯ ಟೌನು ಬೆಳೆಯುತ್ತಾ ಇದೆ. ಮಂಡ್ಯ ಟೌನಿನಲ್ಲಿ ಹೊರಗಿನಿಂದ ಬಂದಿರತಕ್ಕಂಥ ಎಷ್ಟು ಜನ ಸೇರಿಕೊಂಡಿದ್ದಾರೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸರ್ವೆ ಮಾಡಿದ್ದೀರಾ ?

Sri B. D. JATTI.—No survey has been made as to the number of people who have come from outside.

ಶ್ರೀ ಜೆ. ದೇವಯ್ಯ.—ಮಂಡ್ಯ ತಾಲ್ಲೂಕಿನಲ್ಲಿ ಹರಿಜನರು ನಿವೇಶನ ಕೇಳುತ್ತಾ ಇದ್ದು ಬಹಳ ದಿವಸಗಳಾಗಿದೆ. ಆದರೂ ನಿವೇಶನಗಳನ್ನು ಕೊಡುವುದಕ್ಕೆ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ?

Sri B. D. JATTI.—The acquisition proceedings will have to be carried out according to rules and procedure and whatever minimum time is necessary, that time is taken. There is no delay.

Sri G. V. GOWDA.—Is it not possible to liberalise the procedure and the rules with respect to acquisition ?

Sri B. D. JATTI.—So long as the provisions of the Act and Rules are as they are, we have to follow them. As regards their amendment, it is a suggestion for action, which will be considered.

Small and Big Hallas on the Road from Muddebihal to Thalikote.

*Q.—308. Sri S. M. GURADDI (Muddebihal).—

Will the Government be pleased to state ;—

(*a*) the number of small and big hallas on the road from Muddebihal to Thalikote ;

(*b*) out of them, the number of hallas in respect of which Cross Drainage Works have been completed ?

A.—Sri G. B. SHANKARA RAO.—(Parliamentry Secretary to the Minister for Public Works).—

(*a*) 20 small nallas and 3 big nallas.

(*b*) Nil.

ಶ್ರೀ ಎಸ್. ಎಂ. ಗುರೆಡ್ಡಿ.—ಮುದ್ದೇಬಿಹಾಳದಿಂದ ತಾಳೀಕೋಟೆವರೆಗಿನ ರಸ್ತೆಯನ್ನು ಪಿ. ಡಬ್ಲ್ಯೂ. ಡಿ. ಯವರು ಯಾವ ವರ್ಷದಲ್ಲಿ ತೆಗೆದುಕೊಂಡಿದ್ದಾರೆ ?

Sri G. B. SHANKARA RAO.—It was formerly a D.L.B. road. It was taken over by the P.W.D. in 1958.

ಶ್ರೀ ಎಸ್. ಎಂ. ಗುರೆಡ್ಡಿ.—ಈ ರಸ್ತೆಯನ್ನು ಪಿ. ಡಬ್ಲ್ಯೂ. ಡಿ. ಯವರು 1958 ನೆಯ ಇಸವಿಯಲ್ಲಿ ತೆಗೆದುಕೊಂಡಿದ್ದರೂ ಇದುವರೆಗೂ ಯಾವ ಕೆಲಸವಾಗಿಲ್ಲ. ರಸ್ತೆಯ ಕೆಲಸವನ್ನು ಮಾಡದೇ ಇರುವುದಕ್ಕೆ ಕಾರಣವೇನು ?

Sri G. B. SHANKARA RAO.—We have not made any discrimination. This was a very bad road. The entire length of the road is metalled and we have provided for making the road fit for traffic

Sri G. V. GOWDA.—The entire road is metalled without doing cross-drainage works. Can the Government say that the road is complete ?

Sri G. B. SHANKARA RAO.—I do not say that it is completed. We have to improve this road. First we have to metal it. I may say that one mile of this road is even asphalted. Gradually we are going to provide for C.D. works as and when funds are made available.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ತೆಗೆದುಕೊಂಡ ರಸ್ತೆಗಳಿಗೆ ಗ್ರಾಂಟ್ ಕೊಡುತ್ತಾರೆ. ಸ್ಪೆಷಲ್ ರಿಪೇರ್ಸ್ ಗಾಗಿ ವರ್ಷೇ ವರ್ಷೇ ಎಷ್ಟು ಗ್ರಾಂಟು ಕೊಡುತ್ತಾರೆ?

Sri VEERENDRA PATIL.—We propose to spend on improvement Rs. 2,000 per mile spread over a period of 4 years, that is, at the rate of Rs. 500 per year and on maintenance Rs. 750 per mile per year.

Sri C. J. MUCKANNAPPA.—Was not the estimate prepared to spread over the works over a period of years?

Sri G. B. SHANKARA RAO.—We have made a survey of all the Nallahs. Plans and estimates for the bigger C.D. works have been prepared. The works have not been taken up. Only two estimates are ready. We cannot say what the total amount of estimates for all the C.D. works would be.

Sri VEERENDRA PATIL.—Works for maintenance were taken in 3 instalments. This includes the total mileage of 9,000 miles, mostly D·L.B and some very important rural communication roads. The amount provided for improvement of 9,000 miles is 20 lakhs. The mileage is going on increasing because there is much pressure from the Members to take over more and more roads for maintenance and also for improvement. Whatever lumpsum has been provided in the budget, we are distributing it to all the circles looking to the mileage that has been taken over by the P.W.D. in that circle and out of that lumpsum amount, they are expected to spend on every culvert, etc. For this they prepare a programme according to the importance of the road. The entire thing will take some time. It may not be done in one or two years. It will take more time.

Sri. SIDDAIAH KASHIMATH.—May I know how many cross drainage works have been started on this road?

Sri G. B. SHANKARA RAO.—We have not started any C.D work on this road.

ಶ್ರೀ ಎಸ್. ಎಂ. ಗುರೆಡ್ಡಿ.—ಮಹತ್ವದ ರೋಡ್ ಕೆಲಸವನ್ನು ಮೊದಲು ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ರಸ್ತೆ ಮಹತ್ವದ ರೋಡ್ ಆಗಿದೆ. ಯಾವ ಮಹತ್ವದ ರೋಡಿಗಿಂತ ಇದು ಕಡಿಮೆ ಮಹತ್ವದ್ದಾಗಿಲ್ಲ. ಆದರೂ ಇದುವರೆಗೆ ಕೆಲಸ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು?

Sri G. B. SHANKARA RAO.—I do not say that this is an unimportant road. But our resources are limited. We shall think of taking one or two C.D. works this year depending on the availability of funds.

ಶ್ರೀ ಎಸ್. ಎಂ. ಗುರೆಡ್ಡಿ.—ಎಷ್ಟು ವರ್ಷಗಳಿಂದ ಇದೊಂದು ಮಹತ್ವದ ರೋಡ್ ಎಂದು ಸರಕಾರಕ್ಕೆ ಮನವರಿಕೆಯಾಗಿದೆ; ಐದಾರು ವರ್ಷಗಳಾಗಿದ್ದರೂ ಇದುವರೆಗೆ ಒಂದು ಕೆಲಸವನ್ನೂ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು?

Sri G. B. SHANKARA RAO.—It is not the only important road in the State. There are many other important roads. We are taking them up by satges.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಂಡ ಮೇಲೆ, ಇದುವರೆಗೆ ಈ ರೋಡ್ ಮೇಲೆ ಎಷ್ಟು ಖರ್ಚಾಗಿದೆ ?

ಶ್ರೀ ಜಿ. ಬಿ. ಶಂಕರ ರಾವ್.—ನೋಟೀಸು ಬೇಕು.

ಶ್ರೀ ಜೆ. ರಾಮೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಈ ರಸ್ತೆ ಮುಖ್ಯವಾದುದು ಎಂದು ಎಷ್ಟು ವರ್ಷಗಳಿಂದ ಮನವರಿಕೆಯಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಪಿ. ಡಬ್ಲ್ಯೂ. ಡಿ. ಗೆ ಸುಮಾರು 9 ಸಾವಿರ ಮೈಲಿ ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ತಾಲ್ಲೂಕು ಬೋರ್ಡು ವಶದಲ್ಲಿ ಅನೇಕ ರಸ್ತೆಗಳಿವೆ. ನಾವು ಮುಖ್ಯವಾದ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ. ಅನ್‌ಇಂಪಾರ್ಟೆಂಟ್ ರಸ್ತೆಗಳನ್ನು ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಮುಖ್ಯವಾದ ರಸ್ತೆಗಳನ್ನು ಮಾಡುವುದಕ್ಕೂ ನಮಗೆ ಸಾಕಷ್ಟು ದುಡ್ಡಿಲ್ಲ. ನಮಗೆ ಇರುವುದು 20 ಲಕ್ಷ ರೂಪಾಯಿ. ಅದನ್ನು 9 ಸಾವಿರ ಮೈಲಿಗೆ ಹಂಚಿದರೆ, ಪ್ರತಿ ಮೈಲಿಗೆ ಎಷ್ಟು ಬರುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರೇ ತಿಳಿದುಕೊಳ್ಳಬಹುದು. ಪ್ರತಿ ವರ್ಷವೂ ಪಿ. ಡಬ್ಲ್ಯೂ. ಡಿ. ಗೆ 10 ಸಾವಿರ ರೂಪಾಯಿ 1 ಮೈಲಿಗೆ ಬೇಕು. 9 ಸಾವಿರ ಮೈಲಿಗೆ ಸುಮಾರು 9 ಕೋಟಿ ರೂಪಾಯಿ ಬೇಕಾಗುತ್ತದೆ. ದುಡ್ಡು ಇಲ್ಲದೆ ಈ ಕಷ್ಟವಿದೆ; ಮಾಡಬಾರದು ಅನ್ನತಕ್ಕಂಥಾದ್ದು ಇಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಮುದ್ದೇಬಿಹಾಳದಿಂದ ಬಾಗೇವಾಡಿಗೆ ಹೋಗುವ ರಸ್ತೆ ಮುಖ್ಯವಾದುದಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಎರಡೂ ಮುಖ್ಯವಾದುವು, ಎರಡನ್ನೂ ತೆಗೆದುಕೊಂಡಿದ್ದೇವೆ. ನಮ್ಮ ವಶಕ್ಕೆ ರಸ್ತೆ ಬಂದಾಗ ಮಡ್ ರೋಡ್ ಆಗಿತ್ತು. ಆದು ಒಳ್ಳೆಯ ಕಂಡಿಷನ್ನಿನಲ್ಲಿ ಇರಲಿಲ್ಲ. ದುಡ್ಡು ಖರ್ಚುಮಾಡಿ ಮೆಟಲ್ ಮಾಡಿದ್ದೇವೆ. ಪ್ರತಿ ವರ್ಷ 2-3 ಹ್ಯೂಮ್ ಪೈಪ್ ಕಲ್‌ವರ್ಟ್ ಮಾಡಿ ಎಂದು ಆದೇಶ ಕೊಡುತ್ತೇವೆ. ಆದು ಅತಿ ಮುಖ್ಯವಾದ ರಸ್ತೆ ಎಂದು ಒಪ್ಪಿಕೊಂಡಿದ್ದೇವೆ. ಒಂದು ಮೈಲಿ ಟಾರ್ ಆಗಿದೆ. ಕಲ್‌ವರ್ಟ್ ರಸ್ತೆ ಪ್ರತಿ ವರ್ಷ 2-3 ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಪಟ್ಟಣಗಳಲ್ಲಿ ಮುಖ್ಯವಾದ ರಸ್ತೆಗಳು ಎಂದು ಕಂಡುಬಂದಲ್ಲಿ ಅವುಗಳನ್ನು ಮಾಡಲಕ್ಕೆ ತ್ವರಿತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರ ? ಹಳ್ಳಿಗಳಲ್ಲಿ ಇರುವವಕ್ಕೆ ಅಷ್ಟೇ ನಿಗಾ ಕೊಡುವುದಿಲ್ಲ. ಹಳ್ಳಿಗಳಲ್ಲಿರುವ ರಸ್ತೆಗಳಿಗೂ ಅಷ್ಟೇ ನಿಗಾ ಕೊಡುತ್ತೀರ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಅವರು ಹೇಳಿದ್ದು ಅರ್ಥವಾಗಲಿಲ್ಲ. ಪಟ್ಟಣಗಳಲ್ಲಿ ನಾವು ರಸ್ತೆಗಳನ್ನು ಮಾಡುವುದಿಲ್ಲ. ಮುನಿಸಿಪಾಲಿಟಿ ರಸ್ತೆಗಳನ್ನು ಮುನಿಸಿಪಾಲಿಟಿಗಳು ಮಾಡುತ್ತವೆ; ಕಾರ್ಪೊರೇಷನ್ನಿನದನ್ನು ಅವರೇ ಮಾಡಿಕೊಳ್ಳುತ್ತಾರೆ. ನಾವು ನ್ಯಾಷನಲ್ ಹೈವೇ ಇದ್ದರೆ ಮಾತ್ರ ಮೇಂಟೇನ್ ಮಾಡುತ್ತೇವೆ. ಹಳ್ಳಿಗಳ ಜನರ ಅನುಕೂಲತೆಗಾಗಿ ರೂರಲ್ ಕಮ್ಯೂನಿಕೇಷನ್ಸಿಗೆ ಸುಮಾರು 5 ಕೋಟಿ 20 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ರಸ್ತೆಗಳನ್ನು ಮಾಡಿರುವುದು ನಾವು ಹಳ್ಳಿಗಳಲ್ಲಯೇ ಹೊರತು ಪಟ್ಟಣಗಳಲ್ಲಿ ಅಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈ ರೋಡುಗಳು 40 ವರ್ಷಗಳ ಹಿಂದೆ ಡಿ.ಎಲ್.ಬಿ. ಮೆಟಲ್ ಮಾಡಿದ ರಸ್ತೆಗಳು. ಇಲ್ಲಿಯವರೆಗೆ ಇಲಾಖೆ ಒಂದು ಕಲ್ವರ್ಟ್‌ನ್ನು ಮಾಡಿಲ್ಲ. ಅವಶ್ಯ ಸ್ವಲ್ಪ ರಿಸರ್ಫೇಸಿಂಗ್ ಮಾಡಿರಬೇಕು, ಅಷ್ಟೆ. ಅವನ್ನು ಆಲ್-ವೆದರ್ ರೋಡ್ ಮಾಡಲಕ್ಕೆ ತಮ್ಮ ಸಿಬ್ಬಂದಿಯವರಿಗೆ ತಿಳಿವಳಿಕೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರೇ 40 ವರ್ಷಕ್ಕೆ ಮೊದಲು ಮಾಡಿದ ರಸ್ತೆ ಎಂದು ಡಿ.ಎಲ್.ಬಿ.ಯವರು ಸಾಕಷ್ಟು ನಿಗಾ ಕೊಟ್ಟಿರಲಿಲ್ಲ. ನಮ್ಮ ವಶಕ್ಕೆ ಬಂದಾಗ ಕಂಡಿಷನ್ ಚೆನ್ನಾಗಿರಲಿಲ್ಲ. ಹಾಗಿದ್ದಮೇಲೆ ರಿಸರ್ಫೇಸಿಂಗ್ ಮಾಡಿ ಒಳ್ಳೆಯ ಪರಿಸ್ಥಿತಿಗೆ ತರಲಿದ್ದಾರೆ. ಮುಂದಿನ ಕಾರ್ಯಕ್ರಮವೆಂದರೆ ಕಲ್ವರ್ಟ್‌ಗಳು ರಚಿಸುವುದು. ಆ ಕ್ರಮವನ್ನು ತ್ವರಿತವಾಗಿ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತೇನೆ. ಪ್ರತಿವರ್ಷ 2-3ರಂತೆ, 3-4 ವರ್ಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನಪಡುತ್ತೇನೆ.